## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 08 ಆರ್‌ಐಪಿ(1) 2019

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001,
ದಿನಾಂಕ:10.06.2020.

### ಜ್ಞಾಪನ

ವಿಷಯ: ದಿನಾಂಕ:31.12.2018ಕ್ಕೆ ಅಂತ್ಯಗೊಂಡಂತೆ ಆರು ತಿಂಗಳಿಗೂ ಮೇಲ್ಪಟ್ಟು ಹಿಂದಿನ ಬಾಕಿಯಿರುವ ಮಹಾಲೇಖಪಾಲರ ಲೆಕ್ಕ ತಪಾಸಣಾ ವರದಿಯ ಕಂಡಿಕೆಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1) ಪ್ರಧಾನ ಮಹಾಲೇಖಪಾಲರ ಪತ್ರ ಸಂ: Pr.Ag (G&SSA)/ OAD-11/2017-18/147 & 148, ದಿನಾಂಕ:21.02.2019.
2) ಸರ್ಕಾರದ ಪತ್ರ ಸಂಖ್ಯೆ: ಶಿಇ/97/ಐಎಫ್(ಬಿ&ಎ) 2018, ದಿನಾಂಕ:19.03.2019.
3) ಈ ಕಚೇರಿ ಅಧಿಕೃತ ಜ್ಞಾಪನ ಸಮಸಂಖ್ಯೆ ಪತ್ರ ದಿನಾಂಕ: 16/9/2019.
4) ಸರ್ಕಾರದ ಪತ್ರ ಸಂಖ್ಯೆ: ಶಿಇ/97/ಐಎಫ್(ಬಿ&ಎ) 2019, ದಿನಾಂಕ:11.05.2019

-o-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಪತ್ರದಲ್ಲಿ ಮಹಾಲೇಖಪಾಲರು ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ತಾಂತ್ರಿಕ ಸಂಸ್ಥೆಗಳಲ್ಲಿ ಲೆಕ್ಕ ತಪಾಸಣೆ ನಡೆಸಿ ನೀಡಲಾಗಿರುವ ವರದಿಯಲ್ಲಿನ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಕೋರಲಾಗಿರುತ್ತದೆ. ಮಹಾಲೇಖಪಾಲರು ಕೋರಿರುವಂತೆ ದಿನಾಂಕ:31.12.2018ಕ್ಕೆ ಅಂತ್ಯಗೊಂಡಂತೆ ಬಾಕಿಯಿರುವ ಲೆಕ್ಕತಪಾಸಣಾ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ತಿಳಿಸಿರುತ್ತಾರೆ. ಅದರಂತೆ ಉಲ್ಲೇಖ(3)ರ ಈ ಕಚೇರಿ ಪತ್ರದಲ್ಲಿ ಮಹಾಲೇಖಪಾಲರ ಆಕ್ಷೇಪಣೆಯ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಕಂಡಿಕೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ತಿಳಿಸಲಾಗಿತ್ತು. ಆದರೆ ತಮ್ಮಿಂದ ಇದುವರೆವಿಗೂ ಯಾವುದೇ ಅನುಪಾಲನಾ ವರದಿಗಳನ್ನು ಸಲ್ಲಿಸಿರುವುದಿಲ್ಲ. ಉಲ್ಲೇಖ(4)ರ ಸರ್ಕಾರದ ಪತ್ರದಲ್ಲಿ ಮಹಾಲೇಖಪಾಲರ ಲೆಕ್ಕ ತಪಾಸಣಾ ವರದಿಯ ಕಂಡಿಕೆಗಳಿಗೆ ಜರೂರಾಗಿ ಅನುಪಾಲನಾ ವರದಿಯನ್ನು ಸಲ್ಲಿಸಲು ತಿಳಿಸಿರುತ್ತಾರೆ. ಈ ಬಗ್ಗೆ ದಿನಾಂಕ:12.6.2020 ರಂದು ಸರ್ಕಾರದಿಂದ ಸಭೆಯನ್ನು ಕರೆಯಲಾಗಿರುತ್ತದೆ. ಸದರಿ

................2

ಸಭೆಯ ಬಗ್ಗೆ ಮಾನ್ಯ ನಿರ್ದೇಶಕರು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಹಂತದಲ್ಲಿ ಪೂರ್ವಭಾವಿ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಏರ್ಪಡಿಸಿರುವುದರಿಂದ ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರುಗಳು ತಮ್ಮ ವೈಯಕ್ತಿಕ ಗಮನಹರಿಸಿ ಮಹಾಲೇಖಪಾಲರ ಆಕ್ಷೇಪಣೆಯ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ ದಿನಾಂಕ:11.06.2020ರಂದು ಅಪರಾಹ್ನ 3.00 ಗಂಟೆಗೆ ಸಭೆಗೆ ತಪ್ಪದೇ ಹಾಜರಾಗಬೇಕೆಂದು ತಿಳಿಸಲಾಗಿದೆ.

ನಿರ್ದೇಶಕರು

10/6/2020

ಇವರಿಗೆ,

1) ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ.
2) ನಿರ್ದೇಶಕರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3) ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4) ರಿಜಿಸ್ಟ್ರಾರ್ (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5) ಲೆಕ್ಕಾಧಿಕಾರಿಗಳು, ಬಿಯುಡಿ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6) ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.
7) ಕಛೇರಿ ಪ್ರತಿ.